

# ಟೈಗರ್ ಬರುತ್ತಿದ್ದಾನೆ

ಬಾಲಿವುಡ್‌ನಲ್ಲಿ ಟೈಗರ್‌ನದ್ದೇ ಸುದ್ದಿ. ವರ್ಷಾಂತ್ಯಕ್ಕೆ ತೆರೆಗೆ ಬರಲಿರುವ ಸಲ್ಮಾನ್ ಖಾನ್‌ನ 'ಟೈಗರ್ ಜಿಂದಾ ಹೈ' ಚಿತ್ರದ ಕೆಲಸ ಭರದಿಂದ ನಡೆದಿದೆ. ಸಲ್ಮಾನ್ ಖಾನ್ ಮತ್ತು ಕತ್ರೀನಾ ಕೈಫ್ ಇಬ್ಬರ ಜೋಡಿ ಸುಮಾರು ಐದು ವರ್ಷಗಳ ಬಳಿಕ ಮೊದಲ ಬಾರಿಗೆ ತೆರೆಯ ಮೇಲೆ ಬರುತ್ತಿದೆ. ಇಬ್ಬರ ಅಭಿಮಾನಿಗಳಿಗೂ ಇದು ರೋಮಾಂಚನದ ವಿಷಯ.

ಐದು ವರ್ಷಗಳ ಹಿಂದೆ 'ಏಕ್ ಥಾ ಟೈಗರ್' ಚಿತ್ರದ ಮೂಲಕ ಈ ಜೋಡಿ ಪ್ರೇಕ್ಷಕರನ್ನು ಸಖತ್ತಾಗಿ ಮನರಂಜಿಸಿತ್ತು. ಆ ಚಿತ್ರವನ್ನು ಕಬೀರ್ ಖಾನ್ ನಿರ್ದೇಶಿಸಿದ್ದರೆ, ಈಗ 'ಟೈಗರ್ ಜಿಂದಾ ಹೈ' ಚಿತ್ರವನ್ನು ಅಲಿ ಅಬ್ಬಾಸ್ ಜಾಫರ್ ನಿರ್ದೇಶಿಸಿದ್ದಾರೆ. ಶೂಟಿಂಗ್ ಮುಗಿಯುತ್ತಿದ್ದರೂ ಚಿತ್ರದ ಕಥೆ ಏನು ಎನ್ನುವುದನ್ನು ಈವರೆಗೆ ನಿರ್ದೇಶಕರು ಬಿಟ್ಟುಕೊಟ್ಟಿಲ್ಲ. ಮೊದಲ ಭಾಗದಲ್ಲಿ ಭಾರತ ಮತ್ತು ಪಾಕಿಸ್ತಾನದ ಇಬ್ಬರು ಗೂಢಚಾರರ ನಡುವಣ ಪ್ರೇಮ ಕಥಾನಕ ಮತ್ತು ಸಾಹಸ ದೃಶ್ಯಗಳು ಚಿತ್ರದ ಅಪೂರ್ವ ಯಶಸ್ಸಿಗೆ ಕಾರಣವಾಗಿತ್ತು. ಅದೇ ಕಥೆ ಇಲ್ಲೂ ಮುಂದುವರಿದಿದೆ ಎನ್ನುವುದು ಊಹೆ. ಚಿತ್ರದಲ್ಲಿ ಸಲ್ಮಾನ್ ತೋಳಗಳ ಗುಂಪೊಂದರ ಜತೆಗೆ ಸೆಣಸಾಡುವ ದೃಶ್ಯವಿದೆಯಂತೆ. ಈ ಕುತೂಹಲಕರ ದೃಶ್ಯವನ್ನು ಮೊರಾಕ್ಕೊ, ಅಬುಧಾಬಿ, ಆಸ್ಟ್ರಿಯಾ ದೇಶಗಳಲ್ಲಿ ಚಿತ್ರೀಕರಿಸಲಾಗಿದೆಯಂತೆ.

# ಪ್ಲಾಪ್‌ಗಳ ಸಾಲು

ಬಾಲಿವುಡ್‌ನಲ್ಲಿ ತಾರೆಯರ ಮನೆಗಳಲ್ಲಿ ವೈಯಕ್ತಿವಾಗಿ ದೀಪಾವಳಿಯ ಸಂಭ್ರಮದ ಬಗ್ಗೆ ಸುದ್ದಿಗಳ ಮಹಾಪೂರವೇ ಹರಿದಿದೆ. ಆದರೆ ಒಟ್ಟಾರೆಯಾಗಿ ಬಾಲಿವುಡ್ ಉದ್ಯಮಕ್ಕೆ ಈ ಆರ್ಥಿಕ ವರ್ಷ ಅಂತಹ ಖುಷಿಯನ್ನೇನೂ ಕೊಟ್ಟಿಲ್ಲ. ಏಪ್ರಿಲ್‌ನಿಂದ ಸೆಪ್ಟೆಂಬರ್ ಕೊನೆಯವರೆಗಿನ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಹಿಟ್ ಆದದ್ದಕ್ಕಿಂತ ಪ್ಲಾಪ್ ಆದ ಚಿತ್ರಗಳ ಸಂಖ್ಯೆಯೇ ಹೆಚ್ಚು. ಈ ಅವಧಿಯಲ್ಲಿ ಸುಮಾರು 70 ಹಿಂದಿ ಚಿತ್ರಗಳು ಬಿಡುಗಡೆಯಾಗಿದ್ದು ಕೇವಲ ಏಳು ಚಿತ್ರಗಳು ಮಾತ್ರ ಸೂಪರ್‌ಹಿಟ್ ಆಗಿವೆ.

ಸಲ್ಮಾನ್ ಖಾನ್‌ನ ಟ್ಯೂಬ್‌ಲೈಟ್ ಮತ್ತು ಶಾರೂಕ್ ಖಾನ್‌ನ 'ಜಬ್ ಹ್ಯಾರಿ ಮೆಟ್ ಸೆಜಲ್' ಚಿತ್ರಗಳೂ ಹಾಕಿದ ದೊಡ್ಡ ಬಂಡವಾಳವನ್ನು ವಾಪಸ್ ತಂದುಕೊಡಲಿಲ್ಲ ಎನ್ನುವುದು ಏನನ್ನು ಸೂಚಿಸುತ್ತದೆ? ಅಮಿತಾಭ್ ಅಭಿನಯದ 'ಸರ್ಕಾರ್ 3' ಮತ್ತು ಸೋನಾಕ್ಷಿ ಅಭಿನಯದ 'ನೂರ್' ಚಿತ್ರಗಳಂತೂ ದಯನೀಯ ಸೋಲನ್ನು ಕಂಡವು. ಇದರರ್ಥ ಸ್ಪಷ್ಟ– ಭರ್ಜರಿ ಪ್ರಚಾರ ಮತ್ತು ದೊಡ್ಡ ತಾರೆಯರು ಮಾತ್ರ ಸಾಕಾಗುವುದಿಲ್ಲ; ಚಿತ್ರದ ವಸ್ತುವೈವಿಧ್ಯವೇ ಮುಖ್ಯ ಎನ್ನುವುದನ್ನು ಪ್ರೇಕ್ಷಕರು ಈ ವರ್ಷ ಒತ್ತಿ ಹೇಳಿದ್ದಾರೆ. ಹಾಗೆಂದೇ ಬಾಹುಬಲಿ–2, ಬದ್ರೀನಾಥ್ ಕಿ ದುಲ್ಹನಿಯಾ, ಹಿಂದಿ ಮೀಡಿಯಾ, ನ್ಯೂಟನ್ ಮುಂತಾದ ಚಿತ್ರಗಳ ಭರ್ಜರಿ ಯಶಸ್ಸು ಕಂಡಿವೆ.



■ ಬಿಂದು